ವಿಚಾರ ಯಾವ ದಿಕ್ಕಿನಲ್ಲಿ ಬೆಳೆಯಬಹುದಿತ್ತು ಎಂಬುದನ್ನು ಹೇಳು.'

ರಮಾರನ್ನು ರೇಗಿಸಿ ಬರೆಯಲು ಹಚ್ಚುತ್ತಿದ್ದ ಲೋಹಿಯಾ, ತಾವು ಹಲವು ವಿಷಯಗಳನ್ನು ಕುರಿತು ಬರೆಯುವಾಗ ರಮಾ ಜೊತೆ ಮಾತಾಡಿ ವಿಚಾರಗಳನ್ನು ಸ್ಪಷ್ಟಗೊಳಿಸಿಕೊಳ್ಳುತ್ತಿದ್ದರು. ಸಂಶೋಧನಾ ಲೇಖನಗಳನ್ನು ಬರೆಯಲು ರಮಾರ ಸಹಾಯ ಕೋರುತ್ತಿದ್ದರು:

'ಇತಿಹಾಸದ ಎಲ್ಲ ಸ್ಮರಣೀಯ ಕಟ್ಟಡಗಳ ಕಾಲ, ಅವುಗಳ ಹತ್ತಿರದ ಪಟ್ಟಣಗಳ ಹೆಸರು, ಕಟ್ಟಿದ ಇಸವಿ ಸಹಿತ ಒಂದು ಪಟ್ಟಿಯನ್ನು ತಯಾರಿಸು. ನನಗೆ ದಕ್ಷಿಣದ ದೇವಾಲಯಗಳ ನಿಶ್ಚಿತ ಕಾಲ ಮತ್ತು ಸ್ಥಳಗಳ ಮಾಹಿತಿ ಬೇಕು.'

ಈ ಅನನ್ಯ ಬೌದ್ಧಿಕ ಸಂಬಂಧದ ಫಲವಾಗಿಯೂ ರಾಜಕಾರಣಿ ಲೋಹಿಯಾ ಭಾಷೆ, ಲಿಪಿ, ಶಿಲ್ಪ, ಚರಿತ್ರೆ, ಸೌಂದರ್ಯಗಳನ್ನು ಕುರಿತ ಶ್ರೇಷ್ಠ ಸೃಜನಶೀಲ ಪ್ರಬಂಧಗಳನ್ನು ಬರೆದರು. ಲೋಹಿಯಾರ ಸಾಂಸ್ಕೃತಿಕ ಬರಹಗಳಲ್ಲಿ ರಮಾ ಗುಪ್ತಗಾಮಿನಿಯಾಗಿ ಇವತ್ತಿಗೂ ಹರಿಯುತ್ತಿರುವಂತಿದೆ!

ಮಾರ್ಚ್ 23ನೆಯ ತಾರೀಕು ಭಗತ್‌ಸಿಂಗರನ್ನು ಗಲ್ಲಿಗೇರಿಸಿದ ದಿನವೆಂದು ಗೊತ್ತಾದಾಗಿನಿಂದ ಲೋಹಿಯಾ ತಮ್ಮ ಜನ್ಮದಿನದ ಆಚರಣೆಯನ್ನು ಕೈಬಿಟ್ಟಿದ್ದರು. ಆದರೆ ಜಗತ್ತಿನ ಯಾವ ಮೂಲೆಯಲ್ಲಿದ್ದರೂ ರಮಾ ಹುಟ್ಟುಹಬ್ಬಕ್ಕೆ ಹಾರೈಸುವುದನ್ನು ಲೋಹಿಯಾ ತಪ್ಪಿಸುತ್ತಿರಲಿಲ್ಲ. ಪತ್ರ, ಶೀಘ್ರ ಅಂಚೆ, ಟೆಲಿಗ್ರಾಂಗಳ ಮೂಲಕ ಲೋಹಿಯಾ ಹಾರೈಕೆ ರಮಾರನ್ನು ತಲುಪುತ್ತಿತ್ತು:

'ನಿನ್ನ ಜನ್ಮದಿನದಂದೇ ಈ ಪತ್ರ ತಲುಪಿ ನಿನಗೆ ಆನಂದ ತರುವುದೆಂದು ನಂಬುವೆ. ನೂರು ವರ್ಷ ಬಾಳು.'

ಪತ್ರ ಬರೆಯಲು ಸಾಧ್ಯವಾಗದಿದ್ದಾಗ, 'ಮನಸ್ಸಿನಲ್ಲೇ ನಿನಗೆ ಇಪ್ಪತ್ತು ಪತ್ರಗಳನ್ನು ಬರೆದಿದ್ದೇನೆ' ಎನ್ನುವ ಲೋಹಿಯಾ, ರಮಾ ಜೊತೆ ತಮ್ಮ ಅಂದಂದಿನ ಮೂಡುಗಳನ್ನು, ಮನಸ್ಸಿನ ಏರಿಳಿತಗಳನ್ನು ಹಂಚಿಕೊಳ್ಳಲು ಕಾತರಿಸುತ್ತಿದ್ದರು. ವಿಫಲತೆ, ಕಳವಳ, ಭಯಗಳನ್ನೂ ಪತ್ರಗಳಲ್ಲಿ ಹೇಳಿಕೊಳ್ಳುತ್ತಿದ್ದರು:

'ಸೋಲಿನ ಅನುಭವ ನನಗೆ ಮೊದಲೇ ಆಗತೊಡಗಿತ್ತು. ನಾನು ವೈಫಲ್ಯದ ಒಂದು ಕಂತೆಯೇ ಅಲ್ಲವೆ? ವಿಫಲತೆಯ ತತ್ವವನ್ನು ಹೇಳಬಹುದು; ಆದರೆ ಪ್ರತ್ಯಕ್ಷ ಸೋಲನ್ನು ಅನುಭವಿಸುವುದು ಬಹಳ ಕಷ್ಟ. ಅದಿರಲಿ. ಹಿಂದೊಮ್ಮೆ ನನ್ನ ಸೋಲಿನ ಕ್ಷಣದಲ್ಲಿ ನೀನೇ ಸಮಾಧಾನ ಹೇಳಿದ್ದೆಯಲ್ಲ?'

ರಮಾ ಪತ್ರ ಬರುವುದು ತಡವಾದರೆ ಲೋಹಿಯಾಗೆ ಭಯ ಮುತ್ತುವುದು: 'ನಿನ್ನ ಪತ್ರ ತುಂಬ ತಡವಾಗಿ ಬಂತು. ಮನಸ್ಸಿಗೆ ಏನೇನೋ ಭೀತಿಗಳು ಬರತೊಡಗಿದ್ದವು– ನಿನ್ನ ಆರೋಗ್ಯವೂ ಕೆಟ್ಟಿದೆ ಎಂಬ ಭಯ. ನಿನ್ನೆ ರಾತ್ರಿ ನಿನ್ನ ಪತ್ರ ಸಿಕ್ಕಾಗ ತುಂಬಾ ಬೇಜಾರೆನ್ನಿಸಿತು. ನಿನ್ನ ಯೋಗ್ಯತೆಯ ಬಗ್ಗೆ ಮನಸ್ಸನ್ನು ಪದೇ ಪದೇ ಏಕೆ ಕೆಡಿಸಿಕೊಳ್ಳುತ್ತೀಯೋ ನನಗಂತೂ ತಿಳಿಯುವುದಿಲ್ಲ.'

ರಮಾರ ಪತ್ರಕ್ಕಾಗಿ ಕಾಯುತ್ತಾ, 'ನಿನ್ನ ಪತ್ರ ಬರುವುದು ತಡವಾದರೆ ಮನಸ್ಸು ಖಿನ್ನವಾಗುತ್ತದೆ' ಎಂದು ಬರೆಯುತ್ತಲೇ ಲೋಹಿಯಾ ರಮಾರನ್ನು ಕಿಚಾಯಿಸುತ್ತಾರೆ: 'ಪತ್ರವನ್ನು ನಾಲಿಗೆಯ ತುದಿಯ ಎಂಜಲಿನಿಂದ ಮುಚ್ಚುತ್ತಿದ್ದೇನೆ.'

ಮತ್ತೊಂದು ಪತ್ರದಲ್ಲಿ, 'ನಾನು ದೈಹಿಕವಾಗಿ ದುರ್ಬಲನಾಗುತ್ತಿರುವ ಕಾರಣ ತಿಳಿಯದು. ಚಿಕಿತ್ಸೆಗಳು ನನಗೆ ಇಷ್ಟವಿಲ್ಲ' ಎನ್ನುವ ಲೋಹಿಯಾ, ಪತ್ರದ ಕೊನೆಗೆ ಹೇಳುತ್ತಾರೆ: 'ನನ್ನ ಅನಾರೋಗ್ಯದ ಈ ಸ್ಥಿತಿಯಲ್ಲಿ ನನಗೆ ಎಂದಿಗಿಂತ ಹೆಚ್ಚಿನ ಸಹಾನುಭೂತಿ ಹಾಗೂ ಚಹಾದ ಅಗತ್ಯವಿದೆ.'

ಒಮ್ಮೆ ಸ್ವಗತದಂತೆ ಹಲವು ವಿಚಾರಗಳನ್ನು ಪತ್ರದಲ್ಲಿ ಬರೆಯುತ್ತಿದ್ದ ಲೋಹಿಯಾಗೆ ಇದ್ದಕ್ಕಿದ್ದಂತೆ ಅನ್ನಿಸುತ್ತದೆ: 'ಇದನ್ನೆಲ್ಲಾ ನಿನಗೆ ಏಕೆ ಹೇಳುತ್ತಿದ್ದೇನೋ, ತಿಳಿಯದು. ನನ್ನ ಮನಸ್ಸಿನಲ್ಲಿ ಹೆಚ್ಚು ಕಾಲ ನೀನೇ ತುಂಬಿಕೊಂಡಿರುವುದು ಇದಕ್ಕೆ ಕಾರಣವಾಗಿರಬಹುದೆ?'

ಸದಾ ಊರು ಸುತ್ತುತ್ತಿದ್ದ ಲೋಹಿಯಾಗೆ ರಮಾರನ್ನು ನೋಡುವ ಪ್ರೇಮಿಯ ಕಾತರ ಸದಾ ಇರುತ್ತಿತ್ತು. ಒಮ್ಮೆ ಲೋಹಿಯಾ, ರಮಾ ಇಬ್ಬರೂ ಬೇರೆ ಬೇರೆ ಊರುಗಳಿಂದ ಹೊರಟು ಇಂದೋರಿಗೆ ರೈಲಿನಲ್ಲಿ ಬಂದಿಳಿಯಬೇಕಾಗಿತ್ತು. ರೈಲಿಗೆ ಹೊರಡುವ ಮುನ್ನ ಲೋಹಿಯಾ ಬರೆದರು:

'ನಿನ್ನ ಟ್ರೈನೇ ಮೊದಲು ಬರಲಿ. ಇದರಲ್ಲಿ ಸ್ವಲ್ಪ ಸ್ವಾರ್ಥ ಹಾಗೂ ಒಂದು ಉದ್ದೇಶ ಇದೆ. ನಾನು ಹೆಚ್ಚು ಭಾವುಕನಾಗಲಿಚ್ಛಿಸುವುದಿಲ್ಲ.'

ಆ ಕಾಲಕ್ಕಾಗಲೇ ಫ್ರೆಂಚ್ ಅಸ್ತಿತ್ವವಾದಿ ಸಾರ್ತರ್ ಹಾಗೂ ಸ್ತ್ರೀವಾದಿ ಚಿಂತಕಿ ಸಿಮೋನ್ ದ ಬುವಾ ಅವರ ಮುಕ್ತ ಸಂಬಂಧ ಪಶ್ಚಿಮದ ಬೌದ್ಧಿಕ ಲೋಕದಲ್ಲಿ ಹೆಸರಾಗಿತ್ತು. ಆ ಸಂಬಂಧದ ಬಗ್ಗೆ ಲೋಹಿಯಾಗೂ ಗೊತ್ತಿತ್ತು. 1949ರಲ್ಲಿ ಬಂದ ಸಿಮೋನ್ ದ ಬುವಾರ 'ದ ಸೆಕೆಂಡ್ ಸೆಕ್ಸ್' ಎಂಬ ಯುಗ ಪ್ರವರ್ತಕ ಪುಸ್ತಕವನ್ನು ಲೋಹಿಯಾ ಓದಿದ್ದರು: 'ದಿ ಸೆಕೆಂಡ್ ಸೆಕ್ಸ್' ಹೆಣ್ಣನ್ನು ಇತಿಹಾಸ, ಸಾಹಿತ್ಯ ಮತ್ತು ಜೀವಶಾಸ್ತ್ರದ ನೆಲೆಗಳಿಂದ ಶೋಧಿಸುವ ಶ್ರೇಷ್ಠ ಪುಸ್ತಕ' ಎಂದು ಲೋಹಿಯಾ ರಮಾಗೆ ಬರೆದಿದ್ದರು; ರಮಾ ಪಿಎಚ್.ಡಿ. ಅಧ್ಯಯನ ಮಾಡಲು ವಿದೇಶಕ್ಕೆ ಹೊರಟಾಗ ಸಿಮೋನ್ ದ ಬುವಾರನ್ನು ಭೇಟಿ ಮಾಡಲು ಹೇಳಿದ್ದರು.

ರಮಾ ವಿದೇಶಕ್ಕೆ ಹೊರಡಲು ಲೋಹಿಯಾ ನೆರವಾದರು. ಜರ್ಮನಿಯ ಗೆಳೆಯ ವೆರ್ನರ್‌ಗೆ ಬರೆದ ಪತ್ರದಲ್ಲಿ 'ರಮಾ ಮಿತ್ರ ಪ್ರಾಪ್ತವಯಸ್ಕಳಾಗಿಯೂ ಹೊಣೆಗಾರಿಕೆಯಿಲ್ಲದ ಮಗುವಿನಂತಿದ್ದಾಳೆ' ಎನ್ನುತ್ತಾ, ರಮಾಗೆ ನೆರವಾಗಲು ಕೋರಿದ್ದರು. ಇಂಗ್ಲಿಷ್ ಭಾಷೆಯ ಬಗ್ಗೆ, ಅಧ್ಯಯನ ಕ್ಷೇತ್ರದ ಬಗ್ಗೆ ರಮಾಗೆ ಇದ್ದ ಅಳುಕನ್ನು ನಿವಾರಿಸಿ, ಆತ್ಮವಿಶ್ವಾಸ ತುಂಬಿದ್ದರು. 'ಯುರೋಪಿನಲ್ಲಿ ಇತರರು ಎರಡು ವರ್ಷದಲ್ಲಿ ಮಾಡುವುದನ್ನು ನೀನು ಒಂದೇ ವರ್ಷದಲ್ಲಿ ಮಾಡಿ ಮುಗಿಸಬೇಕು' ಎಂದು ಹುರಿದುಂಬಿಸಿದ್ದರು. ರಮಾ ವಿದೇಶಕ್ಕೆ ಹೋದಾಗ ಒಂಟಿತನ ಮುತ್ತಿ ವ್ಯಾಕುಲಗೊಂಡರು:

'ನೀನು ಇಲ್ಲಿಂದ ಹೊರಟು ಹೋದಮೇಲೆ ಎರಡು ವಾರಗಳ ತನಕ ನಾನು ಸಾಕಷ್ಟು ವ್ಯಗ್ರನಾಗಿದ್ದೆ... ಪೋರ್ಟ್ ಸೈದ್ ಇಲ್ಲವೆ ಮಾರ್ಸಿಲ್ಸ್‌ನಿಂದ ಟೆಲಿಗ್ರಾಂ ಅಥವಾ ಪತ್ರ ಬರಬಹುದೆಂದು ನಿರೀಕ್ಷೆ ಮಾಡಿದ್ದೆ. ಮನುಷ್ಯನ ಮನಸ್ಸು ಎಷ್ಟು ಭಾವುಕವಾಗಿರಬಲ್ಲದು ಎಂಬುದು ನಿನಗೆ ಗೊತ್ತಿರಲಿ. ಎಷ್ಟು ತರ್ಕಬದ್ಧವಾಗಿ ಸಮಾಧಾನ ಮಾಡಿದರೂ ಅದನ್ನು ಸರಿಪಡಿಸುವುದು ಕಷ್ಟವೇ. ವಾರದ ಕೊನೆಯಲ್ಲಿ ಬಂದ ನಿನ್ನ ಪತ್ರ ಮನಸ್ಸಿನ ನೋವನ್ನು ಕಡಿಮೆ ಮಾಡಿದೆ... ನನ್ನ ಈ ಭಾವನೆಗಳಿಂದ ನಿನ್ನ ಸಂಶೋಧನೆಗೆ ತೊಂದರೆಯಾಗಬಾರದು.'

ಲೋಹಿಯಾ ಮತ್ತು ರಮಾ ಕಡಲಿನ ಆಚೀಚೆಗೆ ಇದ್ದಾಗಲೂ ಪತ್ರಗಳು ಅಡ್ಡಾಡುತ್ತಿದ್ದವು. ಆತ್ಮಸಂಗಾತ ಮುಂದುವರಿದಿತ್ತು. ಮನೆಯಿಲ್ಲದ ಅಲೆಮಾರಿ ಲೋಹಿಯಾ ಪ್ರತಿ ಸಲ ರಮಾಗೆ ಹೊಸ ಹೊಸ ಕೇರಾಫ್ ವಿಳಾಸಗಳನ್ನು ಕೊಡಬೇಕಾಗಿತ್ತು!

ತಕ್ಷಣ ರಮಾ ಉತ್ತರ ಬರದಿದ್ದರೂ, ರಮಾಗೆ ಬರೆದರೆ ಲೋಹಿಯಾಗೆ ಸಮಾಧಾನವಾಗುತ್ತಿತ್ತು. ನೇಫಾ ಪ್ರದೇಶದಲ್ಲಿ ಲೋಹಿಯಾ ಬಂಧನವಾದಾಗ ವಿದೇಶದಲ್ಲಿದ್ದ ರಮಾಗೆ ಅವರು ಕಳಿಸಿದ ಟೆಲಿಗ್ರಾಂ:

'ಎರಡು ಸಲ ಬಂಧನ. ಆರಾಮ್. ಈಗ ನಿನ್ನೊಡನಿರಬೇಕಿತ್ತು ಎಂಬಾಸೆ. ಲವ್. ರಾಮ್ ಮನೋಹರ್.'

ಸಖಿಯನ್ನು ನೆನೆಯುತ್ತಲೇ ಚಳಿಗಾಲ ಕಳೆದಿರಬಹುದಾದ ಲೋಹಿಯಾ ರಮಾಗೆ ಬರೆಯುತ್ತಾರೆ: 'ಚಳಿಗಾಲ ಮುಗಿಯುತ್ತಿದೆ. ಚಳಿಯ ಕೊರೆತ ಕಡಿಮೆಯಾಗುತ್ತಿದೆ. ಯುರೋಪಿನಲ್ಲಿ ನೀನು ಎದುರಿಸುವ ಮೊದಲ ಚಳಿಗಾಲದ ಕೊರೆತ ಕಡಿಮೆಯಾಗಲು ನನ್ನ ಪತ್ರ ಸಹಾಯ ಮಾಡಿದೆ ಎಂದು ನಂಬುವೆ.'

ರಮಾಗೆ ಲೋಹಿಯಾ ಬರೆಯುತ್ತಿದ್ದ ಪತ್ರಗಳು ಕೆಲವೆಡೆ ದೇಶದ ಸ್ಥಿತಿ ಕುರಿತ ಬರೆದ ಪತ್ರಗಳಂತೆಯೂ ಇರುತ್ತಿದ್ದವು. ಸೂಕ್ಷ್ಮ ಬುದ್ಧಿಜೀವಿಯಾಗಿದ್ದ ಗೆಳತಿಯನ್ನು ಪ್ರಬುದ್ಧ ಚಿಂತಕಿಯನ್ನಾಗಿ, ಲೇಖಕಿಯಾಗಿ ಬೆಳೆಸುವ ಕೆಲಸ; ಸಮಾಜವಾದಿ ಪಕ್ಷದ ಕಾರ್ಯಕರ್ತರನ್ನು, ವಿವಿಧ ಜಾತಿ ವರ್ಗಗಳಿಂದ ಬಂದ ಹೊಸನಾಯಕರನ್ನು ಸಮಾನತೆಯ ರಾಜಕಾರಣಕ್ಕೆ ಅಣಿಗೊಳಿಸಿ, ಉತ್ತಮ ರಾಜಕಾರಣಿಗಳನ್ನಾಗಿ ಬೆಳೆಸುವ ಕೆಲಸ – ಇವೆರಡೂ ಲೋಹಿಯಾ ದೃಷ್ಟಿಯಲ್ಲಿ ಒಂದೇ ಆಗಿದ್ದವು. ಐದು ವರ್ಷ ಅಧಿಕಾರ ನಡೆಸಲು ಆಯ್ಕೆಯಾದ ಸರ್ಕಾರದ ಮೇಲೆ ವಿರೋಧ ಪಕ್ಷವೊಂದು ಎಂಥ ನಿಗಾ ಇಟ್ಟಿರಬೇಕು; ಸರ್ಕಾರವನ್ನು ಹೇಗೆ ಸರಿ ಹಾದಿಯಲ್ಲಿಟ್ಟಿರಬೇಕು; ಜವಾಬ್ದಾರಿಯುತ ವಿರೋಧ ಪಕ್ಷದ ರಾಜಕಾರಣದ ದಿಕ್ಕುದೆಸೆ ಹೇಗಿರಬೇಕು ಎಂಬುದನ್ನೂ ಲೋಹಿಯಾ ಪತ್ರಗಳು ಹುಡುಕುತ್ತಿದ್ದವು.

1957ರ ಚುನಾವಣೆಯ ಸೋಲಿನ ನಂತರ ಲೋಹಿಯಾ ಗಟ್ಟಿ ವಿರೋಧ ಪಕ್ಷವೊಂದನ್ನು ರೂಪಿಸುವ ಸವಾಲುಗಳನ್ನು ದೊಡ್ಡ ಮಟ್ಟದಲ್ಲೇ ಕೈಗೆತ್ತಿಕೊಂಡಿದ್ದರು. (ಸಶೇಷ)